ಜಮೀನು. ಆ ಜಮೀನನ್ನು ಬೆಳೆ ತೆಗೆಯಬಲ್ಲ ಭೂಮಿಯನ್ನಾಗಿಸುವ ಕೆಲಸದಲ್ಲಿ ತನ್ನ ನೋವು, ಸಂಕಟ, ಹತಾಶೆ, ಬಯಕೆ, ಬೇನೆಗಳನ್ನು ಮರೆತು ಬದುಕತೊಡಗಿದಳು. ಆದರೂ ಆಕೆ ಮಾನಸಿಕವಾಗಿ ಸಾಕಷ್ಟು ಕುಗ್ಗಿ ಹೋಗಿದ್ದಳು. ಆಗಲೇ, ಆಕೆಯ ಬದುಕಿನಲ್ಲಿ ವಿಧಿಯು ಬಸಪ್ಪನ ಹೆಂಡತಿ ಸಿದ್ಧಮ್ಮನ ರೂಪದಲ್ಲಿ ಬೇರೆಯದೇ ಆಟವಾಡಲು ಶುರು ಮಾಡಿತ್ತು.

ಯಾವ ರೀತಿಯಿಂದ ಅಳೆದು ತೂಗಿ ನೋಡಿದರೂ ಸಿದ್ಧಮ್ಮನ ಬಾಳೇವಿಯೂ ಕಲ್ಲವ್ವನ ಬಾಳೇವಿಗಿಂತ ಏನೂ ಫರಕು ಇರಲಿಲ್ಲ. ಒಂದು ರೀತಿಯಲ್ಲಿ ಅತ್ತ ದೇಹ ಬಯಕೆಯನ್ನು ಈಡೇರಿಸಿಕೊಳ್ಳುವುದರಲ್ಲಿ ಆಸಕ್ತಿಯೇ ಇಲ್ಲದ ಹುಚ್ಚಪ್ಪನಿಂದಾಗಿ ದಿನ ರಾತ್ರಿಯೂ ಕಲ್ಲವ್ವ ವಿರಹದುರಿಯಲ್ಲಿ ಬೇಯುವಂತಾಗಿದ್ದರೆ, ಇತ್ತ ಅತಿಯಾದ ದೇಹ ಬಯಕೆಯನ್ನು ಹೊಂದಿದ್ದ ಬಸಪ್ಪನು ಹೊತ್ತು ಗೊತ್ತಿಲ್ಲದ ಸಮಯದಲ್ಲಿ ಸಿದ್ಧಮ್ಮನನ್ನು ಹಾಸುಗೆಗೆ ಎಳೆದೊಯ್ದು ಮೈಮೇಲೆ ಗೂಳಿಯಂತೆ ಎರಗಿ ಹಿಂಡಿ ಹಿಪ್ಪೆ ಮಾಡುತ್ತಿದ್ದ ಪರಿಗೆ ಹೈರಾಣಾಗಿ ಹೋಗಿದ್ದಳು. ಆತ ಈ ವಿಚಾರದಲ್ಲಿ ಅದೆಷ್ಟು ಲಜ್ಜೆಗೇಡಿಯಾಗಿದ್ದನೆಂದರೆ, ಸಿದ್ಧಮ್ಮ ಆಗಷ್ಟೇ ಹೊರಗಾದ ಮತ್ತು ಮುಟ್ಟು ನಿಲ್ಲುವ ದಿನಗಳನ್ನೂ ಲೆಕ್ಕಿಸದೇ ಆಕೆಯನ್ನು ಹಿಂಸಿಸುತ್ತಿದ್ದ. ಬಸಪ್ಪನ ವರ್ತನೆಯಿಂದಾಗಿ ಸಿದ್ಧಮ್ಮ ಬಹಳಷ್ಟು ಸಲ ಹೊಟ್ಟೀಲೆ ನಿಂತರೂ ತಿಂಗಳು ತುಂಬುವುದರೊಳಗೆ 'ಹೊಲಿ' ಉಳುದು ಬಿಡುತ್ತಿದ್ದಳು. ಇದರಿಂದಾಗಿ ಆಕೆ ದೈಹಿಕವಾಗಿ ಸೋತುಹೋಗಿದ್ದಳು. ಕಡೆಗೂ ಆತ ಕೊಡುತ್ತಿದ್ದ ಕಾಟಣೆಗೆ ಬೇಸತ್ತು, ಒಂದು ಕೂಸು ಹುಟ್ಟುವ ಮೊದಲೇ ಅದೊಂದು ದಿನ ಇಳಿಸಂಜೆ ಹೊತ್ತಲ್ಲಿ ನೀರು ತರಲೆಂದು ಸಂಕರ ಬಾವಿಗೆ ಹೋಗುವ ನೆಪ ಮಾಡಿ ಮನೆಯಿಂದ ಹೊರ ಬಂದ ಸಿದ್ಧಮ್ಮ ಕೊಡವನ್ನು ಬಾವಿ ದಂಡೆಯ ಮೇಲಿಟ್ಟು, ಉಟ್ಟ ಸೀರೆಯ ಮೇಲೆಯೇ ಓಡಿ ಹೋಗಿ ತೌರುಮನೆಯನ್ನು ಸೇರಿಕೊಂಡವಳು, ಆ ನಂತರ ಗಂಡನ ಮನೆಯ ಹೊಸಿಲು ತುಳಿಯಲೇ ಇಲ್ಲ. ಬಸಪ್ಪನ ಕೈಯಲ್ಲಿ ಅಷ್ಟೊಂದು ಹೈರಾಣಾಗಿ ಹೋಗಿದ್ದ ಸಿದ್ಧಮ್ಮ, ಶಾಶ್ವತವಾಗಿ ತೌರುಮನೆಯನ್ನು ಸೇರಿಕೊಳ್ಳುವುದರ ಮೂಲಕ ಇತ್ತ ಕಲ್ಲವ್ವನ ಭವಿಷ್ಯಕ್ಕೆ ಎರವಾಗಿ ಬಿಟ್ಟಳು.

ಸಿದ್ಧಮ್ಮ ಗಂಡನ ಮನೆಯನ್ನೇ ತೊರೆದು ತನ್ನ ತೌರುಮನೆಯಲ್ಲಿ ಬಂದು ಕುಂತಳೋ ಆಗಲೇ ಬಸಪ್ಪನಿಗೆ ದಿಕ್ಕು ತೋಚದಂತಾಯಿತು. ವಿಷಯ ಹೀಗಿರಲು ದಿನ ಕಳೆದಂತೆ ಆತ ರಾತ್ರಿ ಹೊತ್ತಲ್ಲಿ ಹಾಸುಗೆಯಲ್ಲಿ ಸಿದ್ಧಮ್ಮನ ಸಾಮೀಪ್ಯವಿಲ್ಲದೇ ಹುಚ್ಚನಂತಾಗಿ ಹೋದ. ಇದಾವುದರ ಅರಿವು ಇಲ್ಲದ ಕಲ್ಲವ್ವ ಮಾತ್ರ ತನ್ನ ಗಂಡನೊಂದಿಗೆ ಬಸಪ್ಪನ ಹೊಟ್ಟೆಗೂ ಕೂಳು ಬಡುದು ಹಾಕುವ ಜವಾಬ್ದಾರಿಯನ್ನು ತನಗರಿವಿಲ್ಲದಂಗೆಯೇ ಹೊತ್ತುಕೊಂಡು ಜಲುಮ ಹಾಕುತ್ತ ನಡೆದಿದ್ದಳು. ಆ ಸಂದರ್ಭದಲ್ಲಿಯೇ ಆಕೆಯ ಬದುಕಿನಲ್ಲಿ ಯಾರೂ ಊಹಿಸಲಾಗದ ಘಟನೆಯೊಂದು ಸಂಭವಿಸಿತು.

ಸಿದ್ಧಮ್ಮ ತೌರುಮನೆಯನ್ನು ಸೇರಿಕೊಂಡ ನಂತರ ವರ್ಸಾರು ತಿಂಗಳು ಹೆಣ್ಣಿನ ಸಾಮೀಪ್ಯವನ್ನೇ ಹೊಂದಿರದಿದ್ದ ಬಸಪ್ಪ ತನ್ನ ದೇಹ ಬಯಕೆಯನ್ನು ತಡೆದುಕೊಳ್ಳಲಾಗದೇ ಅದೊಂದು ದಿನ ಇಳಿಸಂಜೆ ಹೊತ್ತಲ್ಲಿ, ಪಡಸಾಲೆಯಲ್ಲಿ ಕಂದೀಲಿನ ಗಾಜು ಒರೆಸುತ್ತ ಕುಂತಿದ್ದ ಕಲ್ಲವ್ವನ ಮೈಮೇಲೆ ಏಕಾಏಕಿ ಆಕ್ರಮಣ ಮಾಡಿದ್ದ. ಇದರಿಂದ ಕಂಗಾಲಾಗಿ ಹೋದ ಆಕೆಗೆ ಆ ಕ್ಷಣದಲ್ಲಿ ಏನು ಮಾಡಬೇಕೆಂದು ತೋಚದಂತಾಯಿತು. ಆ ಗೊಂದಲದಲ್ಲಿರುವಾಗಲೇ ಇನ್ನೇನು ಕಲ್ಲವ್ವನನ್ನು ಇಡಿಯಾಗಿ ಮೈತುಂಬಿಕೊಂಡುಬಿಟ್ಟ ಎನ್ನುವಷ್ಟರಲ್ಲಿ ಆಕೆ ಜೋರಾಗಿ ಬಾಯಿ ಮಾಡಿ ಜನರನ್ನು ಕೂಡಿಸಿದಳು. ಮನೆ ಮುಂದೆ ನೆರೆದ ಜನರನ್ನು ಕಂಡು ಹೆದರಿದ ಬಸಪ್ಪ ಹಿತ್ತಿಲ ಬಾಗಿಲಿನಿಂದ ಓಡಿ ತಪ್ಪಿಸಿಕೊಂಡ. ಈ ಸುದ್ದಿ ಗಾಳಿಯೊಂದಿಗೆ ಬೆರೆತು ಊರ ತುಂಬೆಲ್ಲ ಹರಿದಾಡತೊಡಗಲು, ಯಾರದೋ ಮನೆಯಲ್ಲಿ ಗಂಡ ಹೆಂಡತಿ ನಡುವಿನ ಜಗಳದ ನ್ಯಾಯ ಪಂಚಾಯಿತಿ ಮಾಡುತ್ತ ಕುಂತಿದ್ದ ಹುಚ್ಚಪ್ಪನ ಕಿವಿಯ ಮೇಲೆ ಬಂದು ಬೀಳಲು ಬೆಚ್ಚಿಬಿದ್ದ. ಸುದ್ದಿಯನ್ನು ಕೇಳಿ ಕಟಿಕಟಿ ಬೆವೆತು ಹೋದ ಆತನಿಗೆ ಏನು ಮಾಡಬೇಕೆಂದು ತೋಚದೆ ಒಳಗೊಳಗೆ ಸಂಕಟಪಡತೊಡಗಿದ. ಆ ಸಂಕಟದಲ್ಲಿ ತನಗಾದ ಅವಮಾನವನ್ನು ತಡೆದುಕೊಳ್ಳಲಾಗದ ಹುಚ್ಚಪ್ಪನು ತಟ್ಟನೆ ಅಲ್ಲಿಂದ ಎದ್ದು ಹೋಗಿ ಊರಾಚೆ ಇರೋ ಹುಣಸೆ ಗಿಡಕ್ಕೆ ಉಟ್ಟ ಧೋತರದ ಚಾಳಿಯಿಂದಲೇ ಉರುಲಾಕ್ಕೊಂಡು ಸತ್ತುಹೋದ. ಹುಚ್ಚಪ್ಪ ತೆಗೆದುಕೊಂಡ ಆತುರದ ನಿರ್ಧಾರದಿಂದಾಗಿ ಕಲ್ಲವ್ವನಿಗೆ ದಿಕ್ಕು ತೋಚದಂಗಾಗಲು, ಅದೇ ನೋವಿನಲ್ಲೇ ಅದೆಷ್ಟೋ ಹಗಲು ರಾತ್ರಿಗಳನ್ನು ಚಿಂತೆಯಲ್ಲಿ ಸುಡತೊಡಗಿದಳು. ಕಡೆಗೂ ಒಂದು ನಿರ್ಧಾರಕ್ಕೆ ಬಂದ ಆಕೆ ಹುಚ್ಚಪ್ಪನಿಲ್ಲದ ಈ ಮನೆಯಲ್ಲಿ ತಾನು ಬಾಳೇವಿಯನ್ನು ತೆಗೆಯಲಾರೆ ಎಂದುಕೊಂಡು, ತನ್ನ ಪಾಲಿನ ಒಡಕಿ ಮ್ಯಾಲಿನ ಎರಡೆಕರೆ ಜಮೀನನ್ನು ಇದ್ದ ಪರಿಸ್ಥಿತಿಯಲ್ಲಿಯೇ ಬಿಟ್ಟು ಬಂದು ತೌರುಮನೆಯಲ್ಲಿ ತನ್ನವ್ವನೊಂದಿಗೆ ಇದ್ದುಬಿಟ್ಟಳು. ಒಂದು ರೀತಿಯಲ್ಲಿ ಕೊನೆಗೂ ಕಲ್ಲವ್ವನ ಬಾಳೇವಿಯೂ ಸಿದ್ಧಮ್ಮನ ಬಾಳೇವಿಯಂತೆಯೇ ಆಗಿಹೋಯಿತು.

ಕಲ್ಲವ್ವ, ತನ್ನ ಗಂಡನ ಮನೆಯೊಂದಿಗಿನ ಸಂಬಂಧವನ್ನು ಶಾಶ್ವತವಾಗಿ ಕಡಿದುಕೊಂಡುಬಿಟ್ಟಳು. ಹೇಗೋ ತೌರುಮನೆಯಲ್ಲಿ ನೆರೆಹೊರೆಯವರ ಮನೆಗಳಲ್ಲಿ ಕಸ ಮುಸುರೆಯೊಂದಿಗೆ ಊರವರ ಹೊಲಗಳಲ್ಲಿ ಕೂಲಿ ಕೆಲಸ ಮಾಡಿಕೊಂಡು, ತನ್ನವ್ವನಿಗೆ ತಾನು, ತನಗೆ ತನ್ನವ್ವ ಎಂಬಂತೆ ಒಬ್ಬರಿಗೊಬ್ಬರು ಆಸರೆಯಾಗಿದ್ದುಕೊಂಡು ಜೀವ ಸವೆಸತೊಡಗಿದರು. ಆದರೆ, ಕಲ್ಲವ್ವನ ವಿಚಾರದಲ್ಲಿ ಎಲ್ಲವೂ ನೆಟ್ಟಗೆ ನಡೆದುಕೊಂಡು ಹೋಗುತ್ತಿದೆ ಎಂದುಕೊಳ್ಳುವಾಗಲೇ ವಿಧಿ ವಿಪರೀತ ಎಂಬಂತೆ ಆಕೆಯ ಬದುಕಿನಲ್ಲಿ ಯಾರೂ ಊಹಿಸಲಾಗದ ಘಟನೆಯೊಂದು ಸಂಭವಿಸಿತು. ಅದೊಂದು ದಿನ ವಿಪರೀತ ಜ್ವರ ಬಂದ ನೆಪದಲ್ಲಿ ಹಾಸುಗೆ ಹಿಡಿದ ಕಲ್ಲವ್ವನ ಅವ್ವ, ಆ ಜಡ್ಡಿನಿಂದ ಸುಧಾರಿಸಿಕೊಳ್ಳುವ ಬದಲು ಸತ್ತೇ ಹೋದಳು. ನಿನ್ನೆ ಮೊನ್ನೆಯವರೆಗೆ ಅತ್ಯಂತ ಲವಲವಿಕೆಯಿಂದ ಓಡಾಡಿಕೊಂಡಿದ್ದ ತನ್ನವ್ವ ಇದ್ದಕ್ಕಿದ್ದಂಗೆ ಹೀಗೆ ಉಸುರು ಚೆಲ್ಲಿ ಗುರುವಿನ ಪಾದ ಸೇರಿಕೊಳ್ಳಲು ಕಲ್ಲವ್ವನ ರೆಕ್ಕೆಗಳೇ ಕತ್ತರಿಸಿ ಹೋದಂತಾಗಿ ಆಘಾತಕ್ಕೊಳಗಾದಳು. ಅಕ್ಷರಶಃ ಕಂಗಾಲಾಗಿ ಹೋದ ಆಕೆಯನ್ನು ಇನ್ನಿಲ್ಲದ ಅನಾಥಪ್ರಜ್ಞೆ ಕಾಡತೊಡಗಿತು. ಆಗಲೇ ಈ ಅನಾಥಪ್ರಜ್ಞೆಯನ್ನು ಅನುಭವಿಸಲಾಗದ ಕಲ್ಲವ್ವ ಅದೊಂದು ದಿನ ಸತ್ತೇ ಹೋಗಬೇಕೆಂದು ನಿರ್ಧರಿಸಿದಳು. ಆದರೂ ಸಾಯುವ ಧೈರ್ಯ ಸಾಲದೇ ನಿರ್ಧಾರದಿಂದ ಹಿಂದೆ ಸರಿದಳು. ಕಡೆಗೂ ಗಂಡನ ಮನೆಯಲ್ಲಿದ್ದ ತನ್ನ ಪಾಲಿನ ಒಡಕಿ ಮ್ಯಾಲಿನ ಎರಡೆಕರೆ ಜಮೀನಿಗೋಸ್ಕರವಾಗಿಯಾದರೂ ತಾನು ಜೀವದಿಂದ ಇರಲೇಬೇಕೆಂದುಕೊಂಡು ಮತ್ತೆ ಬದುಕಿನತ್ತ ಮುಖ ಮಾಡಿದಳು. ಆ ಜಮೀನಿನ ಮೇಲೆ ಜೀವವನ್ನೇ ಇಟ್ಟುಕೊಂಡಿದ್ದ ಕಲ್ಲವ್ವ ತಾನು ಸತ್ತು ಹೋಗುವುದರೊಳಗೆ ಅದಕ್ಕೊಂದು ಗತಿ ಕಾಣಿಸಬೇಕೆಂದುಕೊಂಡಿದ್ದಳು.

ಈ ವಿಚಾರವನ್ನು ಅರಿತಿದ್ದ ನಾನು ಆ ಜಮೀನಿನ ಆಶೆಗಾಗಿ ತಾಯಿ–ಮಗ ಎಂಬ ರಕ್ತಸಂಬಂಧದ ಎಳೆಯೊಂದರ ಚುಂಗನ್ನು ಹಿಡಿದುಕೊಂಡು ಅದೆಷ್ಟೋ ಸಲ ಕಲ್ಲವ್ವನ ಮನೆಗೆ ಎಡತಾಕಿದ್ದೆ. ಆಗೆಲ್ಲ, 'ಮುಪ್ಪಿನ ನಿನ್ನನ್ನು ಛಲೋತಂಗಿ ನೋಡ್ಕೊಂತೀನಿ...' ಎಂದು ಸಾಕಷ್ಟು ಸಲ ತಿಳಿಸಿ ಹೇಳಿದ್ದೆನಾದರೂ ಕಲ್ಲವ್ವ ಮಾತ್ರ ಕೇಳಿರಲಿಲ್ಲ. ಆದರೆ, ಈಗೀಗ ವಯಸ್ಸಾದ ಕಾರಣ ತುಸು ಮೆತ್ತಗಾಗಿದ್ದಳು. ಈಗ, ಇದನ್ನೇ ನೆಪವಾಗಿಟ್ಟುಕೊಂಡು ಆಕೆಯ ನಿರ್ಧಾರವನ್ನು ಹೇಗಾದರೂ ಮಾಡಿ ಬದಲಿಸಿ ಹೊಟ್ಟೆ–ಬಟ್ಟೆ, ಜಡ್ಡು ಜಾಪತ್ರೆ ಅಂತ ನೆಪವೊಡ್ಡಿ ನನ್ನೊಂದಿಗೆ ಕರೆದುಕೊಂಡು ಹೋಗಬೇಕು. ಆ ಮೂಲಕ ಒಡಕಿ ಮ್ಯಾಲಿನ ಕಲ್ಲವ್ವನ ಜಮೀನನ್ನು ನನ್ನದಾಗಿಸಿಕೊಳ್ಳಬೇಕೆಂದು ಮನದೊಳಗೆ ನಿರ್ಧರಿಸಿಕೊಂಡು ಬಂದು ಆಕೆಯ ಎದುರಿನಲ್ಲಿ ಕುಂತಿದ್ದೆ.

ಇದುವರೆಗೂ ತಾನು ದಾಟಿ ಬಂದ ಬದುಕಿನ ತಳವನ್ನು ಶೋಧಿಸುತ್ತ ಶೂನ್ಯದಲ್ಲಿ ದೃಷ್ಟಿ ನೆಟ್ಟು ಕುಂತಿದ್ದ ಕಲ್ಲವ್ವನ ಕಿವಿಯ ಮೇಲೆ ಗೋಡೆ ಮೇಲಿದ್ದ ಹಲ್ಲಿಯ 'ಲೊಚ್... ಲೊಚ್...' ಎಂಬ ಶಬ್ದ ಬೀಳುತ್ತಿದ್ದಂಗೆ 'ಹ್ಞಾಂ...' ಎನ್ನುತ್ತ ಸರಕ್ಕನೆ ವಾಸ್ತವಕ್ಕೆ ಬಂದಳು. ನಂತರ, ನನ್ನತ್ತ ದೃಷ್ಟಿ ನೆಟ್ಟು,

'ಮಲ್ಲಣ್ಣ, ಅರಾಮಿದ್ದಿ ಏನು? ಭಾಳ ದಿನಗಳ ಮ್ಯಾಲೆ ನನ್ನ ನೆಪ್ಪಾತೆನು?'

ಕಲ್ಲವ್ವ, ತುಟಿಯೊಳಗೆ ವ್ಯಂಗ್ಯವಾಗಿ ನಗುತ್ತ ಕೇಳಿದಳು. ತುಸು ಗಲಿಬಿಲಿಗೊಳಗಾದ ನಾನು ಸಾವರಿಸಿಕೊಳ್ಳುತ್ತ,

'ಯವ್ವ, ಅರಾಮಿದ್ದಿನಿ ಬಿಡು. ಆದ್ರ, ನೀ ಹಂಗೆಲ್ಲ ಅನ್ಬ್ಯಾಡ ನೋಡು! ಮೊದ್ಲು ಆ ಮಾತು ವಾಪಸ್ ತಗೋ ತಾಯಿ... ಈ ವರ್ಸದಾಗ ನಿನ್ನ ನೋಡ್ಲಿಕ್ಕೆಂತ ಎಷ್ಟು ಸಲ ಬಂದು ಹೋಗೀನಿ. ನೀ ಮರತೇನು? ನೀನು ಕೂಡ ನನ್ನ ಅವ್ವ ಅಲ್ಲೇನು? ನನ್ನ ಎದಿಗಿ ನಾಟಂಗ ಅಂಥ ಮಾತು ಯಾಕ ಅಂತಿಮ? ನಿನ್ನ ನೆಪ್ಪು ಆದಾಗೆಲ್ಲ ನೋಡ್ಲಿಕ್ಕೆಂತ ನಾ